**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 21/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಉಮೇಶ | | ಪ್ರಮಾಣ ಮಾಡಿದ ದಿನಾಂಕಃ |
| ತಂದೆ ಹೆಸರು | ಃ ಓಬಯ್ಯ ಎಂ | | **17.10.2022** |
| ವಯಸ್ಸು | ಃ 31 ವರ್ಷ | | |
| ವೃತ್ತಿ | ಃ ಮೇಲ್ವಿಚಾರಕ | | ಪಿಡಬ್ಲ್ಯೂ ಃ 06 |
| ವಾಸ ಸ್ಥಳ | ಃ ಮೈಸೂರು | | ಸಿಡಬ್ಲ್ಯೂ ಃ 08 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

ಮೃತ ಪವಿತ್ರಾಕುಮಾರಿ ನಮ್ಮ ಮನೆಯ ಮೊದಲ ಮಹಡಿಯಲ್ಲಿ 6 ವರ್ಷಗಳಿಂದ ಬಾಡಿಗೆಗೆ ಇದ್ದರು. ಆರೋಪಿಯನ್ನು ನಾನು ನೋಡಿದ್ದೇನೆ. ಇವರ ನಡುವೆ ಇದ್ದ ಹಣಕಾಸಿನ ವಿಚಾರಗಳು ನನಗೆ ಗೊತ್ತಿಲ್ಲ. ಆಗಾಗ್ಗೆ ಮೃತಳ ಮನೆಗೆ ಯಾವಾಗಲಾದರೂ ಬಂದು ಹೋಗು ತ್ತಿದ್ದಳು. ದಿನಾಂಕ 11.06.2015ರಂದು ಪವಿತ್ರಾಕುಮಾರಿ ಮನೆಯಲ್ಲಿ ತಿಗಣೆ ಔಷಧಿ ಸೇವಿಸಿದ್ದು ಆಸ್ಪತ್ರೆಗೆ ದಾಖಲಾಗಿದ್ದರು. ಅದೇ ದಿನ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ. ಮೃತಳಿಗೆ ಒಬ್ಬ ಮಗಳು, ಮಗ ಹಾಗೂ ಗಂಡ ಇರುತ್ತಾರೆ. ಆರೋಪಿ ಮತ್ತು ಮೃತಳ ನಡುವೆ ಹಣಕಾಸಿನ ವಿಚಾರದಲ್ಲಿ ವಿಷ ತೆಗೆದುಕೊಂಡಿದ್ದಾಳೆ ಎಂದು ತಿಳಿಯಿತು. ಮೃತಳು ತೀರಿಕೊಂಡ ಎರಡು ದಿನಗಳ ನಂತರ ಮೃತಳ ಮನೆಗೆ ಪೊಲೀಸರು ಬಂದಿದ್ದು, ನಿಪಿ-4ರಂತೆ ಮಹಜರ ಬರೆದಿರುತ್ತಾರೆ. ಅದಕ್ಕೆ ನಾನು ರುಜು ಮಾಡಿದ್ದೇನೆ. ಸಾಕ್ಷಿ ರುಜುವನ್ನು ನಿಪಿ-4(ಬಿ) ಎಂದು ಗುರುತಿಸಿದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ .ರವರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕೊಡಲಾಗಿದೆ.

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**17.10.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.